**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 17 /2016**

**ಚಾಸಾ ಃ- 10 / ಪ್ರಾಸಾ ಃ- 09**

| | |
|---|---|
| ಹೆಸರು | ಧರ್ಮೇಗೌಡ |
| ತಂದೆ ಹೆಸರು | ದೇವರಾಜೇಗೌಡ |
| ವಯಸ್ಸು | 42 |
| ಉದ್ಯೋಗ | ಪೋಲಿಸ್ ಇನ್ಸ್ ಪೆಕ್ಟರ್ , ವಿವಿಐಪಿ ಭದ್ರತೆ , ಬೆಂಗಳೂರು |
| ವಿಳಾಸ | ಬೆಂಗಳೂರು |

**ದಿನಾಂಕಃ 07.08.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 09.11.2012 ರಿಂದ 25.06.2014 ವರೆಗೆ ಮಾಗಡಿ ಪೋಲಿಸ್ ಠಾಣೆಯಲ್ಲಿ ಪಿ ಎಸ್ಐ ಎಂದು ಕೆಲಸ ನಿರ್ವಹಿಸಿದ್ದೇನೆ.

ದಿನಾಂಕ 24.04.2013 ರಂದು ರಾತ್ರಿ 7.30 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಠಾಣಾ ಮೊಕದ್ದಮೆ ನಂ .126/2013 ರಂತೆ ಕಲಂ 419 , 420, 353, 468, 171 ಡಿ ಮತ್ತು ಎಫ್ ರ ಐಪಿಸಿ ಜೊತೆಗೆ ಕಲಂ 66, 66ಡಿ ಐ.ಟಿ ಕಾಯ್ದೆ ಹಾಗೂ ಕಲಂ 31 ಆರ್ ಪಿ ಆಕ್ಟ್ ಅಡಿ ಪ್ರಥಮ ವರ್ತಮಾನ ವರಧಿಯನ್ನು ದಾಖಲಿಸಿಕೊಂಡಿರುತ್ತೇನೆ. ಪ್ರಥಮ ವರ್ತಮಾನ ವರಧಿಯನ್ನು ಮಾನ್ಯ ನ್ಯಾಯಾಲಯಕ್ಕೆ ಪಿಸಿ 376 ಪ್ರಶಾಂತ್ ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ ಹಾಗೂ ಇನ್ನೊಂದು ಪ್ರತಿಯನ್ನು ನಮ್ಮ ಮೇಲಾಧಿಕಾರಿಗಳಿಗೆ ಮೆಲ್ ಮುಖಾಂತರ ಕಳುಹಿಸಿರುತ್ತೇನೆ.

ಈಗ ಸಾಕ್ಷಿಗೆ ನಿಪಿ-8 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪ್ರಥಮ ವರ್ತಮಾನ ವರಧಿಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ

ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪ್ರಥಮ ವರ್ತಮಾನ ವರಧಿಯನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 11 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲು** ಃ- **ಶ್ರೀ.ಆ ರ್ ಎಸ್** ವಕೀಲರಿಂದ 1ನೇ **ಆರೋಪಿ** ಪರವಾಗಿ ಃ-

ಪಪ್ರಿಥಮ ವರ್ತಮಾನ ವರಧಿಯ ಕಾಲಂ 12 ರಲ್ಲಿ ದೂರುದಾರರ ಸಹಿ ಇರಬೇಕು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದೂರುದಾರರು ತಹಸಿಲ್ದಾರ್ ಆದ ಕಾರಣ ಅವರು ನಿಮ್ಮ ಠಾಣೆಗೆ ಬಂದಿರುವುದಿಲ್ಲ ರಾಜಕೀಯ ಒತ್ತಡಕ್ಕೆ ಮಣಿದು ಒಂದು ಸುಳ್ಳು ದೂರನ್ನು ದಾಖಲಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- 2 ಮತ್ತು 3 ನೇ **ಆರೋಪಿ** ಪರ ವಕೀಲರು 1 ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿರುತ್ತಾರೆ. ಃ-

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**